ಅ) ಇಲ್ಲ. ಆದರೆ ಈ ಯೋಜನೆಯು ಕೆಲವು ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲು ಸಂಸ್ಥೆಯು ನೆರವಾಗುತ್ತಿದೆ.

ಇ) (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಡಕಲ್ ಜಲಾಶಯದಿಂದ ನಿರ್ಮಾಣವಾಗುತ್ತಿರುವ ಕೊಚರಿ ಏರಣ ಕಾಲುವೆ ಹಾಗೂ ಏರಣಿ ಕೋಚೆರಿ ಯಾತ ನೀರಾವರಿ ಕಾಲಂವೆಗಳ ಬಗ್ಗೆ

೧೭೬(೬೨೭) ಶ್ರೀ ಮಲ್ಲಾರಗೌಡ ಎಸ್ ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಆಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕುರಣಿ ಕೋಚರಿ ಪ್ಲೋ ಕೆನಾಲ್ ಹಾಗೂ ಯಾತ ನೀರಾವರಿ ಕೆಲಸವು ಪ್ರಾರಂಭವಾಗಿ ಎಷ್ಟು ವರ್ಷವಾಯಿತು?

ಆ) ಯಾತ ನೀರಾವರಿ ಸಂಪೂರ್ಣ ಅನುಷ್ಠಾನಕ್ಕೆ ತಂದು ನೀರಾವರಿ ಮಾಡುವುದಕ್ಕಾಗಿ ಇನ್ನು ಎಷ್ಟು ಕಾಲ ಬೇಕಾಗುತ್ತದೆ ಹಾಗೂ ಅದಕ್ಕೆ ತಗಲುವ ಖರ್ಚು ಎಷ್ಟು?

ಇ) ಕುರಣಿ ಹಾಗೂ ಕೊಚರಿ ಕಾಲುವೆಯು ನಿರ್ಮಾಣದಲ್ಲಿ ತೊಂದರೆ ಉದ್ಭವಿಸಿದ್ದು ಅದನ್ನು ದೂರ ಮಾಡಲು ಸರ್ಕಾರದಿಂದ ಇಲ್ಲಿಯವರೆಗೆ ತೆಗೆದು ಕೊಂಡಿರುವ ಕ್ರಮವೇನು?

ಈ) ಕೊಚರಿ ಯಾತ ನೀರಾವರಿ ಕಾಲುವೆಯು ಗ್ರಾಮಪಪನ್ನು ಹೆಚ್ಚು ಮಾಡಿ ಹಿರಣ್ಯಕೇಶಿ ನದಿಯ ಮೇಲೆ ಇರುವ ಗೋಟರು ಬೇಯರಕ್ಕೆ ನೀರು ಬಿಡುವುದಕ್ಕಾಗಿ ಸರ್ಕಾರದಿಂದ ಇಲಾಖೆಗೆ ಯೋಜನಾ ಅಂದಾಜು ತಯಾರು ಮಾಡಲು ಆದೇಶ ನೀಡುವುದರಲ್ಲಿ ತಡ ವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕುರಣಿ ಏತ ನೀರಾವರಿ ಮತ್ತು ಪ್ಲೋ ಕಾಲುವೆಯು ೧೯೮೦-೮೧ರಲ್ಲಿ ಪ್ರಾರಂಭ ವಾಯಿತು. ಕೊಚರಿ ಪ್ಲೋ ಕಾಲುವೆಯು ೧೯೮೨-೮೩ರಲ್ಲಿ ಪ್ರಾರಂಭವಾಯಿತು. ಕೊಚರಿ ಏತ ನೀರಾವರಿ ಯೋಜನೆಯು ಇನ್ನೂ ಪ್ರಾರಂಭವಾಗಿಲ್ಲ,

ಆ) ಕುರಣಿ ಏತ ನೀರಾವರಿ ಯೋಜನೆಯನ್ನು ಹಂತಹಂತವಾಗಿ ಅನುಷ್ಠಾನಕ್ಕೆ ತಂದು ನೀರಾ ವರಿಯನ್ನು ೧೯೯೦ಕ್ಕೆ ಸಂಪೂರ್ಣ ಮಾಡಲು ಯೋಜಿಸಲಾಗಿದೆ. ಇದರ ವೆಚ್ಚ ಸುಮಾರು ರೂ. ೪೬೦ ಲಕ್ಷರೂಗಳು. ಕೊಚರಿ ಏತ ನೀರಾವರಿ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ.

ಇ) ಕುರಣಿ ಯೋಜನೆಯು ಹಂತ ಹಂತವಾಗಿ ನಡೆಯುತ್ತಿದೆ. ಕೊಚರಿ ಏತ ನೀರಾವರಿಯು ಇನ್ನೂ ಪ್ರಾರಂಭವಾಗಿಲ್ಲ.

ಈ) ಕೊಚರಿ ಏತ ನೀರಾವರಿ ಯೋಜನೆಯ ಅನ್ವೇಷಣಾ ಕಾರ್ಯಗಳು ಪ್ರಗತಿಯಲ್ಲಿವೆ. ಅನ್ವೇಷಣೆಗಳು ಪೂರೈಸಿದ ನಂತರ ಅಂದಾಜು ತಯಾರು ಮಾಡಲು ಉದ್ದೇಶಿಸಲಾಗಿದೆ.

ಕೃಷಿಯಲ್ಲಿ ಪ್ರಗತಿ ಸಾಧಿಸಿದ ರೈತರಿಗೆ ಪ್ರಸಸ್ತಿ ನೀಡುವ ಬಗ್ಗೆ

೧೭೭ (೪೦೧) ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯ ವ್ಯವಸಾಯ ರಂಗಕ್ಕೆ ಕೃಷಿ ವಿಶ್ವವಿದ್ಯಾನಿಲಯ ನೀಡಿರುವ ಮಹೋನ್ನತ ಕೊಡುಗೆಗಳು ಯಾವುವು ? ಇದಕ್ಕೆ ಕಾರಣಕರ್ತರಾದ ವಿಜ್ಞಾನಿಗಳು ಯಾರು, ಅವರಿಗೆ ದೊರೆತಿರುವ ಪ್ರಸಸ್ತಿಗಳು ಯಾವುವು ?

ಆ) ರಾಜ್ಯದಲ್ಲಿ ಬೆಳೆಯುವ ನಾನಾ ಬೆಳೆಗಳಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿದ ರೈತರನ್ನು ಪ್ರತಿ ವರ್ಷ ಗೌರವಿಸುವ ಪದ್ಧತಿ ಏನಾದರೂ ರಾಜ್ಯದಲ್ಲಿ ಜಾರಿಯಲ್ಲಿದೆಯೇ?